ಆಗಸ್ಟ್-2021

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಸಂಕೀರ್ಣ

# ಸ್ವಚ್ಛತಾವಾಣಿ

ವಾರ್ತಾಪತ್ರ

ಜಲೋತ್ಸವ

Har Ghar Jal
Jal Jeevan Mission

## "ಕಾರ್ಯಾಗಾರ"



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ರಾಜ್ಯಾದ್ಯಂತ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ, ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನಡೆಸುತ್ತಿರುವ ಕಾರ್ಯಾಗಾರ ಮುಂದುವರೆದಿದ್ದು, ಪ್ರಸ್ತುತ ಮಾಹೆಯಲ್ಲಿ ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದಲ್ಲಿ **ಸ್ವಚ್ಛ ಭಾರತ್ ಮಿಷನ್(ಗ್ರಾ), ಜಲ ಜೀವನ್ ಮಿಷನ್, MGNREGA, NRLM** ಸೇರಿದಂತೆ ಇಲಾಖೆಯ ಯೋಜನೆಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಿದರು. ಈ ವೇಳೆ ಜಿಲ್ಲೆಗಳಲ್ಲಿ ಇಲಾಖೆಯ ಯೋಜನೆಗಳಡಿ ಆಗಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ **Exhibition** ಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಯಿತು.








## Social Media Champion ಸ್ಪರ್ಧೆಯ ಅವಧಿ ವಿಸ್ತರಣೆ:

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ವಿವಿಧ ಸಾಮಾಜಿಕ ಮಾಧ್ಯಮಗಳನ್ನು ನಿರ್ವಹಿಸುತ್ತಾ ಬಂದಿದ್ದು, ರಾಜ್ಯ ಕಚೇರಿಯ ಫೇಸ್‌ಬುಕ್ ಪೇಜ್ ಮತ್ತು ಯೂಟ್ಯೂಬ್ ಚಾನೆಲ್‌ಅನ್ನು ಹೆಚ್ಚೆಚ್ಚು ಜನಪ್ರಿಯಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುತ್ತದೆ. ಈ ನಿಟ್ಟಿನಲ್ಲಿ ಇಲಾಖೆಯ ಫೇಸ್‌ಬುಕ್ ಪೇಜ್ **(https://www.facebook.com/GovtOfKarnatakaRdpr/)** ಹಾಗೂ ಯೂಟ್ಯೂಬ್ ಚಾನೆಲ್ **(https://youtube.com/c/GovtOfKarnatakaRDPR)** ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಗ್ರಾಮೀಣ ಜನರಿಗೆ ತಲುಪಿಸಲು, ದಿನಾಂಕ: 01.03.2021 ರಿಂದ 31.08.2021 ರವರೆಗೆ ಆರು ತಿಂಗಳುಗಳ ಕಾಲ **"Social Media Champion"** ಸ್ಪರ್ಧೆಯನ್ನು ಆಯೋಜಿಸಿತ್ತು.




## ತರಬೇತಿ ಕಾರ್ಯಕ್ರಮಗಳು

### "Training for Empanelled Agencies"

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರಾಜ್ಯದಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದು, ಇಲಾಖೆಯ ಯೋಜನೆಗಳ ಬಗ್ಗೆ ಗ್ರಾಮೀಣ ಜನರಿಗೆ ಮಾಹಿತಿ ಮತ್ತು ಶಿಕ್ಷಣ ನೀಡುವ ಉದ್ದೇಶದಿಂದ ಇಲಾಖೆಯಡಿ **Empanel** ಮಾಡಿಕೊಂಡಿರುವ **Social Media Management Agency, Video Making** ಸಂಸ್ಥೆಗಳು, ಸಮುದಾಯ ಬಾನುಲಿ ಕೇಂದ್ರಗಳು ಹಾಗೂ ಪರಿಹಾರ ಸಹಾಯವಾಣಿಯ **Call Center Executives**ಗಳಿಗೆ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಮಾಹಿತಿ ನೀಡುವ ಉದ್ದೇಶದಿಂದ ದಿನಾಂಕ: 31.07.2021 ರಂದು **Video Conference** ಮೂಲಕ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. **ಉಪ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ಗ್ರಾ)** ಹಾಗೂ **ನಿರ್ದೇಶಕರು(ISA)** ಇವರ ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಇಲಾಖೆಯು ನಿರ್ವಹಿಸುವ ಎಲ್ಲಾ ಘಟಕಾಂಶಗಳ ಬಗ್ಗೆ ವಿಷಯ ತಜ್ಞರುಗಳು ತರಬೇತಿ ನೀಡಿದರು.

## "ವಿಷಯ ವಿನಿಮಯ ಕಾರ್ಯಾಗಾರ"

ಇಲಾಖೆಯು ಅನುಷ್ಠಾನ ಮಾಡುತ್ತಿರುವ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಹಾಗೂ **ಜಲ ಜೀವನ್ ಮಿಷನ್** ಯೋಜನೆಗಳ ಬಗ್ಗೆ, ಇಲಾಖೆಯ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಮಾಲೋಚಕರುಗಳ ನಡುವೆ ವಿಷಯ ವಿನಿಮಯ ಮಾಡುವ ನಿಟ್ಟಿನಲ್ಲಿ ದಿನಾಂಕ: 06.08.2021 ರಂದು ಒಂದು ದಿನದ ಕಾರ್ಯಾಗಾರವನ್ನು **ಆಯುಕ್ತರು, ಗ್ರಾ.ಕು.ನೀ ಮತ್ತು ನೈ ಇಲಾಖೆ** ಇವರ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಇಲಾಖೆಯ ಎಲ್ಲಾ ಶಾಖೆಗಳ ಅಧಿಕಾರಿಗಳು ಹಾಜರಿದ್ದು ಪರಸ್ಪರ ವಿಷಯ ವಿನಿಮಯ ಮಾಡಿಕೊಂಡರು.







## "IEC/HRD Traing Programme"





ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜಲಶಕ್ತಿ ಮಂತ್ರಾಲಯ ಕೇಂದ್ರ ಸರ್ಕಾರ ಇವರ ಸಹಯೋಗದೊಂದಿಗೆ ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು **ಸ್ವಚ್ಛ ಭಾರತ್ ಮಿಷನ್(ಗ್ರಾ)** ಮತ್ತು **ಜಲ ಜೀವನ್ ಮಿಷನ್** ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಗಳ ಕುರಿತು ಗ್ರಾಮೀಣ ಸಮುದಾಯದಲ್ಲಿ ವ್ಯಾಪಕವಾದ ಜಾಗೃತಿ ಮೂಡಿಸಲು ಇಲಾಖೆಯು ಉದ್ದೇಶಿಸಿರುತ್ತದೆ. ಈ ನಿಟ್ಟಿನಲ್ಲಿ ವಿನೂತನ ತಾಂತ್ರಿಕ ಕೌಶಲ್ಯಗಳನ್ನು ಉಪಯೋಗಿಸಿಕೊಂಡು ಪರಿಣಾಮಕಾರಿಯಾದ ಐ.ಇ.ಸಿ. ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಪೂರಕವಾದ ಉತ್ತಮ ಗುಣಮಟ್ಟದ ಸಾಕ್ಷ್ಯಚಿತ್ರ, ಯಶೋಗಾಥೆ, ಕಿರುಚಿತ್ರ, ರೇಖನಾ ದೃಶ್ಯಗಳನ್ನು ತಯಾರಿಸಿ, ಗ್ರಾಮೀಣ ಪ್ರದೇಶದಲ್ಲಿ ನಿರಂತರವಾಗಿ ಪ್ರಚಾರ ಮಾಡುವ ಮೂಲಕ ಜಾಗೃತಿ ಮೂಡಿಸುವ ಗುರಿ ಹೊಂದಲಾಗಿದೆ.

ಈ ನಿಟ್ಟಿನಲ್ಲಿ ಜಿಲ್ಲಾ **SBM(G)** ನೋಡಲ್ ಅಧಿಕಾರಿಗಳು ಹಾಗೂ **IEC/HRD/SH** ಸಮಾಲೋಚಕರುಗಳಿಗೆ ಆಗಸ್ಟ್ 24–25 ಮತ್ತು 30–31 ರಂದು, 2 ಬ್ಯಾಚ್‌ಗಳಲ್ಲಿ ಸಮಾಲೋಚನಾ ಕಾರ್ಯಾಗಾರವನ್ನು ನಗರದ ಖಾಸಗಿ ಹೋಟೆಲೊಂದರಲ್ಲಿ ನಡೆಸಲಾಯಿತು. **ಗ್ರಾ.ಕು.ನೀ ಮತ್ತು ನೈ ಇಲಾಖೆ ಆಯುಕ್ತರ** ನೇತೃತ್ವದಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ಎಲ್ಲಾ ಜಿಲ್ಲೆಗಳ **SBM(G)** ನೋಡಲ್ ಅಧಿಕಾರಿಗಳು ಹಾಗೂ **IEC/HRD/SH** ಸಮಾಲೋಚಕರುಗಳು ಸೇರಿ ಸುಮಾರು 90ಕ್ಕೂ ಹೆಚ್ಚು ಮಂದಿ ಭಾಗವಹಿಸಿದರು. ಈ ವೇಳೆ ಇಲಾಖೆಯ **ಉಪ ಕಾರ್ಯದರ್ಶಿ(ಆಡಳಿತ), ಉಪ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ಗ್ರಾ), ನಿರ್ದೇಶಕರು(ISA)** ಸೇರಿದಂತೆ ಇಲಾಖೆಯ ವಿವಿಧ ಘಟಕಾಂಶಗಳ ವಿಷಯ ತಜ್ಞರುಗಳು ತರಬೇತುದಾರರಿಗೆ ತರಬೇತಿ ನೀಡಿದರು.